

ಡಾ.ವಿನೋದ ಛೆಬ್ಬಿ

ಹಿರಿಯರಿಂದ ವ್ಯವಸ್ಥೆಗೊಂಡ ಮದುವೆಗಳು ವಿಚ್ಛೇದನ ಹೊಂದುವಂತೆ ಪ್ರೇಮವಿವಾಹಗಳಿಗೂ ವಿಚ್ಛೇದನ ಹೊಂದಲು ಆಯ್ಕೆಯಿದೆ.

# 128: ನಾವೆಲ್ಲಿ ತಪ್ಪಿದೆವು?-3

ರಾಮಣ್ಣ- ಸೀತಾಲಕ್ಷ್ಮಿ ಅವರ ಮಗಳು ಹೆತ್ತವರ ವಿರುದ್ಧ ಬಡವನನ್ನು ಮದುವೆ ಆದುದರ ಬಗೆಗೆ ಮಾತಾಡುತ್ತಿದ್ದೆವು. ವಿನಯವಂತ ಹಾಗೂ ಆತ್ಮಗೌರವ ಇರುವವರು ಸಂಪತ್ತು ಗಳಿಸಿಕೊಳ್ಳುವುದೇನೂ ದೊಡ್ಡ ಮಾತಲ್ಲ. ಆದರೆ ಹಣ ಇರುವವರು ವಿನಯ ಹಾಗೂ ಆತ್ಮಗೌರವ ಉಳಿಸಿಕೊಂಡಿರುವುದು ವಿಶೇಷವೆಂದು ಒತ್ತಿಹೇಳಿದ್ದೆ. ಇದೆಲ್ಲ ಹೇಳುವಾಗ ರಾಮಣ್ಣ ಸುಮ್ಮನಿದ್ದು ನಂತರ ಮಾತಾಡಿದ.

'ಹುಡುಗನನ್ನುಕಟ್ಟಿಕೊಳ್ಳೋದಕ್ಕೆ ಮುಂಚೆ ನಮ್ಮನ್ನೂ ಒಂದು ಮಾತು ಕೇಳಬೇಕಿತ್ತು. ನಾವೇನು ಇಲ್ಲವೆನ್ನುತ್ತಿದ್ದೆವೆ?' ಎಂದ. ಸೀತಾಲಕ್ಷ್ಮಿ ಥಟ್ಟನೆ ಹೇಳಿದಳು. 'ಅಯ್ಯೋ ಸುಮ್ಮನಿರಿ. ಆಕೇನೂ ಹುಡುಗನೂ ಒಟ್ಟಿಗಿದ್ದಾಗ ಕೆಂಡಾಮಂಡಲ ಆಗಿ, ಆ ಹುಡುಗನಿಗೆ ಇನ್ನೊಂದು ಸಲ ಕಣ್ಣಿಗೆ ಬಿದ್ದರೆ ಜೈಲಿಗೆ ಹಾಕಿಸುತ್ತೇನೆ ಎಂದು ಓಡಿಸಿರಲಿಲ್ಲವೆ?' ರಾಮಣ್ಣ ಗಲಿಬಿಲಿಗೊಂಡ. ಅವರು ಕದ್ದುಮುಚ್ಚಿ ಮದುವೆಯ ತನಕ ಹೋಗುತ್ತಾರೆ ಅಂತ ತನಗೆಲ್ಲಿ ಗೊತ್ತಿತ್ತು ಎಂದು ಸಮರ್ಥಿಸಿಕೊಳ್ಳಲು ಹೋಗಿ, ವ್ಯರ್ಥವೆಂದು ಅರಿತು ತೆಪ್ಪಗಾದ. ನಂತರ ನನ್ನತ್ತ ತಿರುಗಿದ. 'ಅವಳಿಗೆ ಏನು ಕಡಿಮೆ ಮಾಡಿದ್ದೆವು? ಮೊದಲ ಮಗು ಎಂದು ಕೇಳಿದ್ದೆಲ್ಲ ಕೊಡಿಸಿ, ಅಷ್ಟು ಪ್ರೀತಿ ತೋರಿಸಿದರೂ ಇವಳ್ಯಾಕೆ...?' ಗದ್ಗದಿತನಾದ. ಸೀತಾಲಕ್ಷ್ಮಿಯೂ ಗದ್ಗದಿತಳಾಗುತ್ತ ಇನ್ನೊಂದು ಪ್ರಶ್ನೆ ಕೇಳಿದಳು. 'ನಮ್ಮ ಹುಡುಗಿಯನ್ನು ಅಲ್ಲಿ ಹೇಗೆ ನಡೆಸಿಕೊಳ್ಳುತ್ತಾರೆ ಅಂತ ಯೋಚನೆಯಾಗಿದೆ. ಈಕೆ ಸಂಸಾರ ಸಾಗಿಸುವಷ್ಟು ಪ್ರಬುದ್ಧಳಾಗಿ ಬೆಳೆದಿದ್ದಾಳೆಯೆ?' ಅದಕ್ಕೆ ರಾಮಣ್ಣ, 'ಆಕೆ ಬಹಳಾ ಬುದ್ಧಿವಂತಳು...' ಎಂದ. ಅವನ ಮಾತಿನಲ್ಲಿ ಮಾಹಿತಿಗಿಂತ ವ್ಯಂಗ್ಯ ಹೆಚ್ಚಾಗಿರುವುದನ್ನು ಗುರುತಿಸಿ, ನೇರವಾಗಿಯೇ ಕೇಳಿದೆ. 'ಯಾಕೆ, ನೀವು ಮಗಳನ್ನು ನಂಬುವುದಿಲ್ಲವೆ?' ಆತ ಹಾರಿಕೆಯ ಉತ್ತರ ಕೊಟ್ಟ. 'ನನ್ನನ್ನೇ ನಾನು ನಂಬುವುದಿಲ್ಲ. ನಾನು ನಂಬುವುದು ದೇವರನ್ನು ಮಾತ್ರ' ಎಂದ. ತಾನು ಬೆಳೆದದ್ದು ಎಲ್ಲವೂ ದೇವರ ಕೃಪೆಯಿಂದ ಮಾತ್ರ ಎಂದ. ಅದು ಅತಿವಿನಯವೋ ಅಥವಾ ತನ್ನನ್ನೇ ತಾನು ನಂಬದಿರುವುದರ ಲಕ್ಷಣವೋ ಗೊತ್ತಾಗಲಿಲ್ಲ.

ಇದರರ್ಥ ಏನು? ಮಗಳ ಹಠಾತ್ ಸ್ವತಂತ್ರ ನಿರ್ಧಾರವು ಇಬ್ಬರಿಗೂ ನುಂಗಲಾರದ ತುತ್ತಾಗಿದೆ. ಹೆತ್ತು ಬೆಳೆಸಿದ್ದಕ್ಕೆ ದ್ರೋಹ ಎನ್ನಿಸಿದೆ. ಮಗಳು ನಮ್ಮವಳಾದರೂ ಅವಳ ಕೃತ್ಯ ನಮ್ಮದಲ್ಲ ಎಂದು ನಂಬಲು ಬಯಸುತ್ತಿದ್ದಾರೆ. ಅಪ್ಪನು ಮಗಳನ್ನು ನಂಬುತ್ತಿಲ್ಲ, ಹಾಗೂ ಅಮ್ಮನಿಗೆ ಆಕೆಯ ದಾಂಪತ್ಯದ ಭವಿಷ್ಯದ ಬಗೆಗೆ ಯೋಚನೆಯಿದೆ. ಇದನ್ನು ಅರ್ಥಮಾಡಿಸುವುದಕ್ಕೆ ಸಮಸ್ಯೆಯ ಮೂಲವನ್ನು ಕೆದಕಲು ನಿರ್ಧರಿಸಿದೆ.

'ನಿಮ್ಮಲ್ಲಿ ಸಾಮಾನ್ಯವಾಗಿ ಹಿರಿಯರೇ ಮದುವೆಯ ಸಂಬಂಧವನ್ನು ಕುದುರಿಸುತ್ತಾರೆ, ಅಲ್ಲವೆ?' ಇಬ್ಬರೂ ಹೌದೆಂದು ತಲೆ ಅಲ್ಲಾಡಿಸಿದರು. 'ಒಂದು ನಿಮಿಷ ಹುಡುಗನ ಹಿರಿಯರ ಕಡೆಯಿಂದ ಯೋಚಿಸಿ. ಅವರಿಗೆ ಹುಡುಗಿ ಮಾತ್ರ ಗೊತ್ತಷ್ಟೆ. ಆಕೆಯ ಅಪ್ಪ-ಅಮ್ಮ ಯಾರು, ಮನೆತನ ಹೇಗೆ ಒಂದೂ ಗೊತ್ತಿಲ್ಲ. ಹಾಗಿರುವಾಗ, ಹುಡುಗಿಯ ಬಗೆಗೆ ಸಂದೇಹಪಟ್ಟು ಮದುವೆ ಬೇಡವೆನ್ನಬಹುದಿತ್ತು. ಹಾಗಿದ್ದರೂ ಈಕೆಯನ್ನು ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲ, ತಾವೇ ಖರ್ಚುಮಾಡಿ ಮದುವೆ ಮಾಡಿಕೊಂಡು ಸುಖಸಂಸಾರ ನಡೆಸಲು ಅನುಕೂಲ ಮಾಡಿಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಅವರು ಯಾವ ಆಧಾರದ ಮೇಲೆ ಇವಳನ್ನು ಒಪ್ಪಿಕೊಂಡರು? ಹುಡುಗಿಯಲ್ಲಿ ಅಂಥಾದ್ದನ್ನು ಏನು ಕಂಡರು? ಇದರರ್ಥ ಏನು? ಮತ್ತು ತಮ್ಮ ಸೊಸೆಯನ್ನು ಹೇಗೆ ನೋಡಿಕೊಳ್ಳಬಹುದು ಅಂತ ನಿಮಗೆ ಅನ್ನಿಸುತ್ತದೆ?' ಎಂದು ಪ್ರಶ್ನೆಗಳನ್ನು ಮುಂದಿಟ್ಟೆ. ಅವರಿಗೇನೂ ಹೊಳೆಯಲಿಲ್ಲ. ನಾನೇ ವಿವರಿಸಿದೆ.

'ಹುಡುಗಿಯ ಜೊತೆಗೆ ವ್ಯವಹರಿಸಿದಾಗ ಅವಳ ಉತ್ತಮ ಗುಣನಡತೆ ಗೊತ್ತಾಗಿದೆ. ರೀತಿ- ನಡತೆಗಳು ಸಂಸ್ಕಾರದಿಂದ ಬರುತ್ತವಷ್ಟೆ? ''ಅಗುಳಿನ ಮೇಲೆ ಅನ್ನದ ಪರೀಕ್ಷೆ'' ಎನ್ನುವಂತೆ ಹುಡುಗಿ ಚೆನ್ನಾಗಿದ್ದರೆ ಆಕೆಯ ಮನೆತನ, ಅಪ್ಪ-ಅಮ್ಮ ಎಲ್ಲವೂ ಚೆನ್ನಾಗಿರಲೇಬೇಕು. ಹಾಗಾಗಿ ಇನ್ನೇನೂ ಪರೀಕ್ಷಿಸುವ ಅಗತ್ಯ ಅವರಿಗೆ ಕಾಣಲಿಲ್ಲ. ಇದರರ್ಥ ಏನು? ನೀವಿಬ್ಬರೂ ಮಗಳನ್ನು ಚೆನ್ನಾಗಿಯೇ ಬೆಳೆಸಿದ್ದೀರಿ ಅಂತಾಯಿತು, ಅಲ್ಲವೆ?' ಇದನ್ನು ಕೇಳುತ್ತ ಅವರ ಚಿಂತೆ ಅಚ್ಚರಿಯಾಗಿ ಬದಲಾಯಿತು. ನಾನು ಮುಂದುವರಿಸಿದೆ.

ಇನ್ನೊಂದು ವಿಷಯ: 'ತಮ್ಮ ಮಗನು ಒಬ್ಬಳು ಹುಡುಗಿ ತನಗಿಷ್ಟ ಎನ್ನುವಾಗ ತಾಯ್ತಂದೆಯರು ಅವನ ಆಯ್ಕೆಯನ್ನು ಸಂದೇಹಿಸದೆ, ಅದಕ್ಕೆ ಆಕ್ಷೇಪಣೆ ಎತ್ತದೆ ಸಂತೋಷದಿಂದ ಒಪ್ಪಿಕೊಂಡಿದ್ದಾರೆ. ಇದರರ್ಥ ಏನು? ಅವರಿಗೆ ಮಗನ ಮೇಲೆ, ಅವನ ಆಯ್ಕೆಯ ಮೇಲೆ ನಂಬಿಕೆಯಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಅಂದರೆ ಅವರು ಅವನನ್ನು ಪೋಷಿಸಿದ್ದು, ಪ್ರೀತಿಸಿದ್ದು ಅಲ್ಲದೆ ನಂಬಿಕೆಯನ್ನೂ ಇಟ್ಟಿದ್ದಾರೆ. ಅವರ ಈ ನಂಬಿಕೆಯಿಂದಲೇ ನಿಮ್ಮ ಮಗಳು ಸುಖವಾಗಿರಲಿಕ್ಕೆ ಸಾಧ್ಯವಾಗಿದೆ. ನಂಬಿಕೆ ಇಲ್ಲದಿದ್ದರೆ ಏನು ಮಾಡುತ್ತಿದ್ದರು? ಮಗನ ಮೇಲಿನ ಅಪನಂಬಿಕೆಯನ್ನು ಸೊಸೆಯ ಮೇಲೆ ತೋರಿಸುತ್ತಿದ್ದರು. ಆಗ ಇವಳಿಗೆ ಕಿರುಕಳ ಆಗುತ್ತಿತ್ತು! ಕಿರುಕಳಕ್ಕೆ ನಂಬದಿರುವುದೂ ಕಾರಣ. ಕೇವಲ ಪ್ರೀತಿಸಿದರೆ ಸಾಲದು, ನಂಬಿಕೆಯನ್ನೂ ಇಡಬೇಕು. ಆಗ ಮಾತ್ರ ಮಕ್ಕಳು ತಾಯ್ತಂದೆಯರೊಂದಿಗೆ ಮುಕ್ತವಾಗಿ ವ್ಯವಹರಿಸಲು ಭರವಸೆ ಮೂಡುತ್ತದೆ. ಏನೆನ್ನುತ್ತೀರಿ?' ಇಬ್ಬರೂ ಯೋಚನೆಗೆ ಬಿದ್ದರು. ಹುಡುಗನ ಅಪ್ಪ-ಅಮ್ಮ ಅವನನ್ನು ನಂಬಿದಂತೆ ತಾವು ತಮ್ಮ ಮಗಳ ಮೇಲೆ ನಂಬಿಕೆ ಇಟ್ಟಿದ್ದೆವೆ ಎಂದು ಅವರು ತಮ್ಮನ್ನು ಪ್ರಶ್ನಿಸಿಕೊಳ್ಳುವ ಹಾಗಿತ್ತು.

'ಇನ್ನು ಮಗಳಿಗೆ ಕೊಟ್ಟ ಸಂಸ್ಕಾರದ ಬಗೆಗೆ ಬರೋಣ. ಮಗಳು ಹುಡುಗನನ್ನು ಮೆಚ್ಚಿಸುವುದೇನೂ ಕಷ್ಟವಲ್ಲ. ಆದರೆ ಅವನ ಹಿರಿಯರನ್ನು – ಅದೂ ತನ್ನ ಹಿರಿಯರನ್ನು ನಡುವೆ ತರದೆ – ಮೆಚ್ಚಿಸುವುದು ಎಷ್ಟು ಕಠಿಣ ಅಲ್ಲವೆ? ಅಂಥದ್ದರಲ್ಲಿ ಅವಳು ಸುಖವಾಗಿದ್ದಾಳೆ ಎನ್ನುವುದನ್ನು ನೋಡಿದರೆ ಆಕೆ ಸಾಕಷ್ಟು ಪ್ರಬುದ್ಧಳಾಗಿದ್ದಾಳೆ, ಹಾಗೂ ಈ ಪ್ರಬುದ್ಧತೆಯ ಹಿಂದೆ ಹಿರಿಯರ ಪಾತ್ರವಿರಲೇಬೇಕು, ಅಲ್ಲವೆ?' ಎಂದು ಸೀತಾಲಕ್ಷ್ಮಿಯನ್ನು ನೋಡಿದೆ. ಸ್ವತಂತ್ರ ನಿರ್ಧಾರ ಕೈಗೊಳ್ಳುವುದು ಪ್ರಬುದ್ಧತೆಯ ಲಕ್ಷಣವೇ ವಿನಾ ಹಿರಿಯರನ್ನು ಧಿಕ್ಕರಿಸುವ ಸಂಕೇತವಲ್ಲ ಎಂದು ತಿಳಿಸಿಕೊಟ್ಟೆ. ಒಂದುವೇಳೆ ಹಾಗಿದ್ದರೆ ಮಗಳು ತವರಿನೊಂದಿಗೆ ಸಂಪರ್ಕ ಕಡಿದುಕೊಳ್ಳಬೇಕಿತ್ತು. ಹಾಗಾಗದೆ ಆಕೆ ದಿನವೂ ಮಾತಾಡುತ್ತಿದ್ದಾಳೆ.

ಗೊಂದಲಕ್ಕೆ ಒಳಗಾಗಿದ್ದ ಅವರಿಗೆ ನಿಧಾನವಾಗಿ ಸ್ಪಷ್ಟತೆ ಮೂಡಲು ಶುರುವಾಯಿತು. ಮಗಳ ಭಾವನೆಗಳಿಗೆ ಹಿರಿಯರು ಸಂವೇದನೆ ತೋರದಿರುವುದೇ ಆಕೆಯ ನಿರ್ಧಾರಕ್ಕೆ ಕಾರಣ ಎನ್ನುವುದು ಅರಿವಿಗೆ ಬಂದಂತೆ, ದ್ರೋಹಕ್ಕೆ ಒಳಗಾಗಿ ಗಾಸಿಯಾದವರು ಬಿಡುಗಡೆಯ ನಿಟ್ಟುಸಿರು ಬಿಟ್ಟರು. ತಾವು ಬೆಳೆಸಿದ ರೀತಿಯಲ್ಲಿ ದೋಷವಿದೆಯೆಂದು ಅಂದುಕೊಂಡವರು ಮಗಳು ನಿರ್ಧಾರ ಸಾಮರ್ಥ್ಯವು ತಮ್ಮ ಸಂಸ್ಕಾರದಿಂದ ಬಂದುದು ಎಂದು ಹೆಮ್ಮೆಪಟ್ಟರು. ಅಮಾಯಕ ಬಾಲಕಿಯು ಸ್ವಂತಂತ್ರವಾಗಿ ಬದುಕುವ ಪ್ರಬುದ್ಧೆಯಾಗಿ ಬದಲಾದುದನ್ನು ಕಂಡು ಮೂಕವಿಸ್ಮಿತರಾದರು. ನೋವು ತಿನ್ನುತ್ತ ಬಂದವರು ನಿರಾಳವಾದರು.

ನೆರೆಹೊರೆಯವರನ್ನು ಹೇಗೆ ಎದುರಿಸುತ್ತೀರಿ ಎಂಬ ಪ್ರಶ್ನೆಗೆ ರಾಮಣ್ಣ, 'ಮನೆ ಬದಲಾಯಿಸುತ್ತೇನೆ... ಇಷ್ಟುದೊಡ್ಡ ಊರಲ್ಲಿ ಹೊಸ ಜಾಗದಲ್ಲಿ ನಮ್ಮನ್ನು ಅಲ್ಲಿ ಯಾರು ಗುರುತಿಸುತ್ತಾರೆ? ಸಂಬಂಧಿಕರಿಗೆ, ಮಗಳು ಅಳಿಯ ಬೇರೆ ದೇಶದಲ್ಲಿದ್ದಾರೆ ಎಂದು ಹೇಳುತ್ತೇನೆ.' ಎನ್ನುತ್ತ ಹೊರಡಲು ಎದ್ದ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (11ರಿಂದ ಸಂಜೆ 5ರ ತನಕ).